ತಗಳ್ಳೋದು ಸುಲಭ ಅಲ್ಲ ಬ್ರೆಕ್ಟ್. ಇನ್ನೂ ಹೆಚ್ಚು ಹೆಚ್ಚು ಬರೆದು ಮತ್ತಷ್ಟು ಹೆಸರು ತಗೊ.'' ''ನಮ್ಮ ಜಾತಿ ಸಮುದಾಯಗಳ ನೋವು ಸಂಕಟಗಳನ್ನು ಯಾವ ಮುಜುಗರವೂ ಇಲ್ಲದೆ, ಇನ್ಫಿರಿಯಾರಿಟಿ ಕಾಂಪ್ಲೆಕ್ಸ್ ಇಲ್ಲದೆ ಅನಾವರಣಗೊಳಿಸುವುದು ಇಂದಿನ ಬಹು ತುರ್ತಿನ ಕೆಲಸವಾಗಿದೆ. ಅದನ್ನು ನಿಮ್ಮಂಥವರು ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ'' ಮುಂತಾಗಿ ಬ್ಯಾಚ್ಮೇಟುಗಳು, ಸೀನಿಯರ್‌ಗಳು ಕೈ ಕುಲುಕಿ ಕುಲುಕಿ ಮಾತನಾಡಿದ್ದರು. ಅಧ್ಯಯನ ಕೇಂದ್ರದ ಸೀನಿಯರ್ ವಿದ್ಯಾರ್ಥಿ ನಾಗರಾಜ್, ''ನಾಳೆ ನಮ್ಮ ಅಧ್ಯಯನ ಕೇಂದ್ರದ ಡೈರೆಕ್ಟರ್ ಡಾಕ್ಟರ್ ಸಿದ್ದೇಶ್ ಹತ್ತಿರ ಮಾತಾಡ್ತೀನಿ ಬ್ರೆಕ್ಟ್. ತುಂಬಾ ಖುಷಿ ಪಡ್ತಾರೆ, ಅವರೂ ನಮ್ಮ ಸಮುದಾಯದವರೇ ಅಲ್ವೆ. ನಿಮಗೊಂದು ಸನ್ಮಾನ ಇಟ್ಕೊಂಡು ಹಂಗೆ ಒಂದು ಸಂವಾದಾನೂ ಇಟ್ಕೊಳ್ಳೋಣ. ವೈಸ್‌ಚಾನ್ಸಲರನ್ನೂ ಕರೆಯೋಣ. ಬಂದ್ರೆ ಬರ್ಲಿ'' ಎಂದು ಖುಷಿಯಿಂದ ಹೇಳಿದ್ದು ಬ್ರೆಕ್ಟನಲ್ಲಿ ಇನ್ನಷ್ಟು ಚೈತನ್ಯ ತುಂಬಿಕೊಳ್ಳುವಂತೆ ಮಾಡಿತ್ತು. ಮಧ್ಯಾಹ್ನ ಊಟ ಮಾಡಿಕೊಂಡು ಸಿಟಿಗೆ ಹೋದ ಬ್ರೆಕ್ಟ್ ಕೆಂಪೇಗೌಡ ರಸ್ತೆಯಲ್ಲಿನ ವಿಷ್ಣು ಭವನದ ಮುಂದಿರುವ ಮ್ಯಾಗಜಿನ್ ಅಂಗಡಿಯಲ್ಲಿ ವಿಶೇಷಾಂಕ ಕೊಂಡು ಅಲ್ಲೇ ನಿಂತು ತೆರೆದು ನೋಡಿದ್ದ. ಕತೆಯ ಶೀರ್ಷಿಕೆಯ ಪಕ್ಕ ತನ್ನ ಫೋಟೊ, ಅದರ ಕೆಳಗೆ ಹೆಸರು ನೋಡಿ ಪುಳಕಗೊಂಡ. ನಿಜಕ್ಕೂ ಇಂಥ ಗಳಿಗೆಯೊಂದು ಒದಗಿ ಬರುತ್ತದೆಂದು ಬ್ರೆಕ್ಟ್ ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ಕತೆಗೆ ಬರೆದ ರೇಖಾಚಿತ್ರ ಕೂಡ ತುಂಬಾ ಸೊಗಸಾಗಿ ಮೂಡಿ ಬಂದಿತ್ತು. ವಿಶೇಷಾಂಕ ಹಿಡಿದು ಮೆಜೆಸ್ಟಿಕ್, ಕೆಂಪೇಗೌಡ ರಸ್ತೆಯಲ್ಲಿ ಬಿಂಕದಿಂದ ಓಡಾಡಿ ಮೆಟ್ರೊ ರೈಲು ಹತ್ತಿ ನಾಯಂಡಹಳ್ಳಿ ಸ್ಟೇಷನ್ನಿನಲ್ಲಿ ಇಳಿದು ಅಲ್ಲಿಂದ ಬಸ್ಸು ಹತ್ತಿ ಹಾಸ್ಟೆಲ್ ತಲುಪಿದ.

ಮಾರನೆಯ ದಿನ ಸೋಮವಾರ ಹತ್ತು ಗಂಟೆಗೆ ಅಧ್ಯಯನ ಕೇಂದ್ರಕ್ಕೆ ಹೋದಾಗ ಸುಮಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಬಂದು ಕೈ ಕುಲುಕಿ ಅಭಿನಂದನೆಗಳನ್ನು ಹೇಳಿದ್ದರು. ಹಾಗೆ ಅನೂಹ್ಯ ಕೂಡ ಕೈ ಕುಲುಕಿ ಅಭಿನಂದನೆಗಳನ್ನು ಹೇಳಿದ್ದಳು. ಅನೂಹ್ಯಳ ಮೃದುವಾದ ಕೈ ಸೋಕಿ ಬ್ರೆಕ್ಟ್ ರೋಮಾಂಚನಗೊಂಡಿದ್ದ. ಡೈರೆಕ್ಟರ್ ಕರೆದಿದ್ದರಿಂದ ಚೇಂಬರ್ ಹೊಕ್ಕಿದ್ದ. ನಾಗರಾಜ್ ಮತ್ತು ಇನ್ನೊಂದಿಬ್ಬರು ಸೀನಿಯರ್ ವಿದ್ಯಾರ್ಥಿಗಳು ಕುಳಿತಿದ್ದರು. ''ಬ್ರೆಕ್ಟ್, ಅದ್ಭುತ ಅದ್ಭುತ'' ಎಂದು ಡೈರೆಕ್ಟರ್ ಸಿದ್ದೇಶ್ ಸಂಭ್ರಮಿಸಿದ್ದರಲ್ಲದೆ ಬರುವ ಶುಕ್ರವಾರ ನಾಲ್ಕು ಗಂಟೆಗೆ ಸಂವಾದ ಮತ್ತು ಸನ್ಮಾನ ಕಾರ್ಯಕ್ರಮವನ್ನು ನಿಗದಿ ಮಾಡಿಯೂ ಬಿಟ್ಟರು. ಕ್ಲಾಸಿನಲ್ಲಿ ಆಗಾಗ ಅನೂಹ್ಯ ಬ್ರೆಕ್ಟನ ಕಡೆ ನೋಡಿ ನಗುತ್ತಿದ್ದಳು. ಅವನೂ ನಗೆ ಬೀರುತ್ತಿದ್ದ. ಅನೂಹ್ಯಳನ್ನು ಕ್ಯಾಂಟೀನ್‌ಗೆ ಕಾಫಿಗೆ ಕರೆಯೋಣವೆಂದೆನಿಸಿದರೂ ಏಕೋ ಧೈರ್ಯ ಬಂದಿರಲಿಲ್ಲ. ಬಹುಮಾನದ ಮೊತ್ತ ಹತ್ತು ಸಾವಿರ ರೂಪಾಯಿಗಳು ಬಂದ ಮೇಲೆ ಎಂ.ಜಿ. ರಸ್ತೆಯಲ್ಲಿನ ಯಾವುದಾದರೂ ಒಂದು ಒಳ್ಳೆಯ ಹೋಟೆಲಿಗೆ ಕರೆದುಕೊಂಡು ಹೋಗಿ ಊಟ ಕೊಡಿಸಬೇಕೆಂದುಕೊಂಡ. ಬ್ರೆಕ್ಟ್ ಡಿಗ್ರಿ ಓದುವಾಗ ಎಂ.ಜಿ. ರಸ್ತೆಯಲ್ಲಿನ ಹಾಸ್ಟೆಲಿನಲ್ಲೆ ಮೂರು ವರ್ಷ ಇದ್ದಿದ್ದು. ಅಲ್ಲೆಲ್ಲಾ ಸಿಕ್ಕಾಪಟ್ಟೆ ತಿರುಗಾಡಿದ್ದರೂ ತಿಂಡಿ, ಊಟ ಮಾತ್ರ ಹಾಸ್ಟೆಲ್ ಬಿಟ್ಟು ದೊಡ್ಡ ದೊಡ್ಡ ಹೋಟೆಲುಗಳಲ್ಲಿ ಮಾಡಿರಲಿಲ್ಲ. ಫೈನಲ್ ಇಯರ್‌ನಲ್ಲಿ ಯಾವಾಗಲೋ ಒಂದೆರಡು ಸಾರಿ ದಲಿತ ಸಂಘರ್ಷ ಸಮಿತಿಯ ಲೀಡರುಗಳ ಬಲವಂತಕ್ಕೆ ಒಂದೊಂದು ಗ್ಲಾಸ್ ಬಿಯರ್ ಕುಡಿದು ಅರ್ಧರ್ಧ ಬಿರಿಯಾನಿ ತಿಂದಿದ್ದ.

ಶುಕ್ರವಾರ ಬಂದೇ ಬಿಟ್ಟಿತ್ತು. ಅಧ್ಯಯನ ಕೇಂದ್ರದಲ್ಲಿ ಸಂಭ್ರಮ ತುಂಬಿಕೊಂಡಿತ್ತು. ಅಧ್ಯಯನ ಕೇಂದ್ರದ ವಿದ್ಯಾರ್ಥಿಗಳೇ ಅಲ್ಲದೆ ಹಿಸ್ಟರಿ, ಸೋಸಿಯಾಲಜಿ, ಪೊಲಿಟಿಕಲ್ ಸೈನ್ಸ್, ಎಕನಾಮಿಕ್ಸ್ ವಿಭಾಗದ ಕೆಲವು ವಿದ್ಯಾರ್ಥಿಗಳೂ ನೆರೆದಿದ್ದರಿಂದ ಸಭಾಂಗಣ ತುಂಬಿತುಳುಕುತ್ತಿತ್ತು. ಬ್ರೆಕ್ಟನಿಗೆ ಶಾಲು ಹೊದಿಸಿ, ಏಲಕ್ಕಿ ಹಾರ ಹಾಕಿ ಬುದ್ಧ, ಬಸವ, ಅಂಬೇಡ್ಕರ್ ಮೂವರೂ ಒಟ್ಟಿಗೆ ಇರುವ ಒಂದು ಮೊಮೆಂಟೊ ನೀಡಿ ಸನ್ಮಾನಿಸಲಾಯಿತು. ಅನೂಹ್ಯ ಮುಂದಿನ ಸಾಲಿನಲ್ಲಿ ಕುಳಿತಿದ್ದಳಲ್ಲದೆ ತನ್ನ